ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ. ಯವರ ನ್ಯಾಯಾಲಯ, ಕುಂದಾಪುರ

ಸಿ.ಸಿ. ನಂಬ್ರ:1828/2014

ಚಾಸಾ:3 ಪ್ರಾಸಾ:3

ದಿನಾಂಕ: 31.08.2024

| | | |
|---|---|---|
| ವಾಗ್ಮೂಲದವರ ಹೆಸರು | : | ಶ್ರೀಮತಿ ಜ್ಯೋತಿ |
| ಗಂಡನ ಹೆಸರು | : | ರಘು ಪೂಜಾರಿ |
| ವಯಸ್ಸು | : | 44 ವರ್ಷ |
| ಉದ್ಯೋಗ | : | ಗೃಹಿಣಿ |
| ವಾಸ ಸ್ಥಳ | : | ಕೋಣಿ |

ಸಾಕ್ಷಿಯನ್ನು ಪ್ರಮಾಣೀಕರಿಸಲಾಯಿತು.

**ಮುಖ್ಯ ವಿಚಾರಣೆ: ಮಾನ್ಯ ಸ.ಸ.ಅ.ರವರಿಂದ:**

ದಿ: 08-05-2014 ರಂದು ನಾನು ನನ್ನ ತಾಯಿ ಮನೆಗೆ ದಿ: 29-05-2014 ರಂದು ನನ್ನ ತಂಗಿಯ ಮದುವೆ ಇರುವ ಕಾರಣ ಹೋಗಿದ್ದು, ನಾನು ಮನೆಯ ಅಂಗಳ ಸ್ವಚ್ಛಗೊಳಿಸುತ್ತಿದ್ದಾಗ ಅಲ್ಲಿದ್ದ ಹೊಂಡವನ್ನು ತುಂಬಿಸಲು ಮಣ್ಣು ಬೇಕೆಂದು ಪ್ರಾಸಾ-2ರವರು ಒಂದು ಲೋಡ್ ಮಣ್ಣನ್ನು ತರಿಸಿದ್ದು, ಮಧ್ಯಾಹ್ನ 1-15 ಗಂಟೆಗೆ ಗಾಡಿ ಬಂದಿದ್ದು, ಶಿವ ಪ್ರಸಾದ್ ರವರ ಮನೆ ಬಳಿ ಗಾಡಿ ಬರುತ್ತಿದ್ದಾಗ ಆರೋಪಿತರು ನನ್ನನ್ನು ಮತ್ತು ಪ್ರಾಸಾ-2ರವರನ್ನು ತಡೆದು ನಿಲ್ಲಿಸಿ ಬೇವರ್ಶಿ, ಸೂಳೇ ಮಕ್ಕಳೇ ಎಂದು ಅವಾಚ್ಯ ಶಬ್ದಗಳಿಂದ ಬೈದು ಟಿಪ್ಪರ್ ಮಣ್ಣನ್ನು ತರಿಸಿ electric ಕಂಬವನ್ನು ಮುರಿಯುತ್ತೀರಾ ಎಂದು ಬೈದು ಅಲ್ಲಿ ಇದ್ದ ರಾಡ್ ನಿಂದ ಪ್ರಾಸಾ-1ರವರ ಎರಡೂ ಕೈಗಳಿಗೆ, ಬೆನ್ನಿಗೆ, ತಲೆಗೆ 1ನೇ ಆರೋಪಿ ಹೊಡೆದಿರುತ್ತಾರೆ.

ಉಳಿದ ಆರೋಪಿತರು ನನಗೂ ಮತ್ತು ನನ್ನ ಪ್ರಾಸಾ-2ರವರಿಗೆ ಕೈಗಳಿಂದ ಹೊಡೆದಿರುತ್ತಾರೆ. ಈ ಜಾಗಕ್ಕೆ ಬಂದರೆ ಜೀವ ಸಹಿತ ಬಿಡುವುದಿಲ್ಲ ಎಂದು ಬೆದರಿಕೆ ಹಾಕಿರುತ್ತಾರೆ. ಪ್ರಾಸಾ-1ರವರಿಗೆ ಹೆಚ್ಚಿನ ಗಾಯಗಳಾದ ಕಾರಣ ನಾವು ಆಕೆಯನ್ನು ಸರಕಾರಿ ಆಸ್ಪತ್ರೆಗೆ ದಾಖಲಿಸಿದಾಗ ಆಕೆಯ ಬಲಕೈ

ಮೂಳೆ ಮುರಿದಿದೆ, ಪ್ಲೇಟ್ ಮತ್ತು ರಾಡ್ ಹಾಕಿ ಅಪರೇಷನ್ ಮಾಡಲು ಸೌಲಭ್ಯವಿಲ್ಲದೆ ಬೇರೆ ಕಡೆ ಚಿಕಿತ್ಸೆ ಪಡೆಯುವಂತೆ ಸೂಚಿಸಿರುತ್ತಾರೆ. ಸಾಕ್ಷಿಯು ನ್ಯಾಯಾಲಯದ ಮುಂದೆ ಇರುವ 1ನೇ ಆರೋಪಿಯನ್ನು ನೋಡಿ ಗುರುತಿಸಿರುತ್ತಾರೆ. ಆರೋಪಿತರೆಲ್ಲರೂ ನಮ್ಮ ಪಕ್ಕದ ಮನೆಯವರು. ಮರುದಿನ ಅಪರೇಷನ್ ಗಾಗಿ ಮಂಜುನಾಥ ಆಸ್ಪತ್ರೆಗೆ ಪ್ರಾಸಾ-1ರವರನ್ನು ದಾಖಲಿಸಿರುತ್ತೇವೆ. ಪ್ರಾಸಾ-1ರವರು ದೂರು ದಾಖಲಿಸಿದ್ದು ನಾನು ಸಾಕ್ಷ್ಯ ನುಡಿದಿರುತ್ತೇನೆ.

ನನ್ನ ಬೆನ್ನು, ತಲೆ ಮತ್ತು ಕೈಗೆ ಆರೋಪಿತರು ಹೊಡೆದಿದ್ದು ನಾನು ಹೊರರೋಗಿಯಾಗಿ ಚಿಕಿತ್ಸೆ ಪಡೆದಿರುತ್ತೇನೆ. ಪ್ರಾಸಾ-1ರವರ ಸೀರೆಯನ್ನು ಆರೋಪಿತರು ಘಟನೆ ವೇಳೆಗೆ ಹರಿದು ಹಾಕಿರುತ್ತಾರೆ. ಈ ವಿಚಾರವಾಗಿ ಪೊಲೀಸರು ಯಾವ ದಿನಾಂಕದಂದು ನನ್ನನ್ನು ವಿಚಾರಿಸಿದ್ದರು ಎಂದು ನೆನಪಿಲ್ಲ ಆದರೆ ವಿಚಾರಿಸಿದ್ದಾರೆ.

<u>**ಪಾಟೀ ಸವಾಲುಃ ಆರೋಪಿತರ ಪರ ವಕೀಲರಾದ ಶ್ರೀ ಬಿ. ಆರ್ ಎನ್ ರವರಿಂದಃ**</u>

ನಮ್ಮ ತಾಯಿ ಮನೆ ಮತ್ತು ಆರೋಪಿತರ ನಡುವೆ ಜಾಗದ ವಿಚಾರದಲ್ಲಿ ತಕರಾರು ಇದೆ ಎಂದು ಹೇಳಿರುತ್ತಾರೆ. ನನಗೆ ವೈಯಕ್ತಿಕವಾಗಿ ಅದರ ಬಗ್ಗೆ ಮಾಹಿತಿ ಇಲ್ಲ. ನಾನು ಕೋಣೆಯಲ್ಲಿ ನಿರಂತರವಾಗಿ ವಾಸಿಸುತ್ತೇನೆ. ಟಿಪ್ಪರ್ ಬಂದಾಗ ನನ್ನ ಪ್ರಕಾರ ಆರೋಪಿತರ ಜಾಗಕ್ಕೆ ಯಾವುದೇ ತೊಂದರೆ ಆಗಿಲ್ಲ. Electric ಕಂಬಕ್ಕೆ ಸದ್ರಿ ವಾಹನ ತಾಗಿರುವುದಿಲ್ಲ. ಸದ್ರಿ ದಿನ ಶಾಮೀಯಾನದ ಕಂಬದಲ್ಲಿ ಹೊಡೆದಿರುತ್ತಾರೆ. ಆದರೆ ನಾನು ಹೇಳಿಕೆ ನೀಡಿದಾಗ ಪೊಲೀಸರು ರಾಡ್ ಎಂದು ಬರೆಯುವುದಾಗಿ ತಿಳಿಸಿರುತ್ತಾರೆ. ರಾಡ್ ಮತ್ತು ಕಂಬ ನನ್ನ ಪ್ರಕಾರ ಎರಡೂ ಒಂದೇ ಆಗಿರುತ್ತದೆ. ನನ್ನ ಪ್ರಕರಣಕ್ಕೆ ಅನುಗುಣವಾಗಿ ಅದನ್ನು ರಾಡ್ ಎಂದು ಈಗ ನುಡಿಯುತ್ತಿದ್ದೇನೆ ಎಂದರೆ ಸರಿ.

ಸದ್ರಿ ಕಂಬವನ್ನು ಒಬ್ಬ ವ್ಯಕ್ತಿ ಎತ್ತಬಹುದು. ಆರೋಪಿಗಳ ಪೈಕಿ ಒಬ್ಬ ವ್ಯಕ್ತಿ ಕಂಬವನ್ನು ಎತ್ತಿ ಪ್ರಾಸಾ-1ರವರಿಗೆ ಹಲ್ಲೆ ಮಾಡಿರುತ್ತಾರೆ. ಅಂತಹ ಕಂಬದಿಂದ ಹೊಡೆದ ಪಕ್ಷದಲ್ಲಿ ತಲೆ ಮತ್ತು ಬೆನ್ನಿಗೆ ವಿಪರೀತವಾಗಿ ಗಾಯವಾಗುತ್ತದೆ ಎಂದರೆ ಸರಿ. ಆ ರೀತಿ ಪ್ರಾಸಾ-1ರವರ ತಲೆ ಮತ್ತು ಬೆನ್ನಿಗೆ ಹಲ್ಲೆಯ ಹಿನ್ನೆಲೆಯಲ್ಲಿ ಗಾಯವಾಗಿರುತ್ತದೆ. ನಮ್ಮ ನಡುವೆ ದ್ವೇಷ ಇರುವ ಕಾರಣ ಪ್ರಕರಣಕ್ಕೆ ಅನುಗುಣವಾಗಿ ಸುಳ್ಳು ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ಪೊಲೀಸರು ಪಿರ್ಯಾದಿಯನ್ನು ಮನೆಗೆ ಬಂದು

ಪಡೆದಿರುತ್ತಾರೆ. ಪ್ರಾಸಾ-1ರವರು ಮನೆಯಲ್ಲಿ ದೂರನ್ನು ನೀಡಿರುತ್ತಾರೆ. ಆಗ ನಾನು ಇದ್ದೆ. ನಾನು ಯಾವುದೇ ದಾಖಲೆಗೆ ಸಹಿ ಮಾಡಿದ ನೆನಪಿಲ್ಲ. ನಿಪಿ-1ನ್ನು ಪೊಲೀಸರು ಬರೆದಿರುತ್ತಾರೆ. ಪ್ರಾಸಾ-1ರವರು ಸದ್ರಿ ದಿನ ಪೊಲೀಸರಿಗೆ ಯಾವುದರಿಂದ ಹಲ್ಲೆ ಮಾಡಿದ್ದು ಎಂದು ಹೇಳಿರುವ ಬಗ್ಗೆ ನೆನಪಿಲ್ಲ.

ಮೊದಲಿಗೆ ಪ್ರಾಸಾ-1ರವರು ಸರಕಾರಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದಿರುತ್ತಾರೆ. ಅಲ್ಲಿ ಅಪರೇಷನ್‌ಗಾಗಿ ಸೌಲಭ್ಯವಿಲ್ಲ ಎಂದು ಹೇಳಿರುತ್ತಾರೆ. ಸದ್ರಿ ವೈದ್ಯರ ಹೆಸರು ಶಿವಕುಮಾರ್. ಅನಂತರ ಮಂಜುನಾಥ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದಿರುತ್ತಾರೆ. ನನಗೆ ಕೈಯಿಂದ ಹಲ್ಲೆ ಮಾಡಿರುವುದಾಗಿ ವೈದ್ಯರಿಗೆ ತಿಳಿಸಿರುತ್ತೇನೆ. ಬೆನ್ನು ಮತ್ತು ಕೈಯಲ್ಲಿ ರಕ್ತ ಹೆಪ್ಪುಗಟ್ಟಿರುತ್ತದೆ. ಅದಕ್ಕೆ ಚಿಕಿತ್ಸೆ ಪಡೆದಿರುತ್ತೇವೆ. ಅಂತಹ ಯಾವುದೇ ಗಾಯವಾಗಿಲ್ಲ ಎಂದರೆ ಸರಿಯಲ್ಲ.

ನನ್ನ, ಪ್ರಾಸಾ-1 ರವರ ವಿರುದ್ದ ಕ್ರೈಂ ನಂಬ್ರ 119/2014ರಂತೆ ಪ್ರಕರಣ ದಾಖಲಾಗಿತ್ತು ಎಂದರೆ ನನಗೆ ತಿಳಿದಿಲ್ಲ. ಸಾಕ್ಷಿ ಮುಂದುವರೆದು ಕೊಟ್ಟಿರಬಹುದು ನನಗೆ ತಿಳಿದಿಲ್ಲ ಎಂದು ನುಡಿದಿರುತ್ತಾರೆ. ಪ್ರಾಸಾ-1ರವರು ಈ ಘಟನೆಯ ನಡೆಯುವ 1 ವಾರದ ಮೊದಲು ಬಿದ್ದು ಆದ ಪೆಟ್ಟನ್ನು ದುರಪಯೋಗಪಡಿಸಿಕೊಂಡು ಈ ಪ್ರಕರಣ ದಾಖಲಿಸಿರುತ್ತಾರೆ ಎಂದರೆ ಸರಿಯಲ್ಲ. ಅದಕ್ಕಾಗಿ ಸರಕಾರಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯದೆ ನಮಗೆ ಅನುಕೂಲವಾಗುವಂತೆ ಖಾಸಗಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದಿರುತ್ತೇವೆ ಎಂದರೆ ಸರಿಯಲ್ಲ. ಮೇಲೆ ಹೇಳಿದಂತೆ ಯಾವುದೇ ಘಟನೆ ಅಥವಾ ಹಲ್ಲೆ ನನ್ನ ಮತ್ತು ಪ್ರಾಸಾ-1, 2 ರವರ ಮೇಲೆ ನಡೆದಿಲ್ಲ ಎಂದರೆ ಸರಿಯಲ್ಲ. ಘಟನೆ ನಡೆಯುವ ವೇಳೆಗೆ ಸ್ವಲ್ಪ ಜನರು ಬಂದಿದ್ದರು. ಅಂತಹ ಯಾವುದೇ ಪ್ರತ್ಯಕ್ಷದರ್ಶಿಗಳನ್ನು ಪೊಲೀಸರು ವಿಚಾರಿಸಿದ ಬಗ್ಗೆ ನನಗೆ ತಿಳಿದಿಲ್ಲ. ಪೂರಕವಾಗಿ ಯಾವುದೇ ಸಾಕ್ಷ್ಯಧಾರಗಳು ಸಿಗದ ಕಾರಣ ಅವರನ್ನು ತೋರಿಸಿರುವುದಿಲ್ಲ ಎಂದರೆ ಸರಿಯಲ್ಲ. ಪ್ರಾಸಾ- 1ರವರು ನನ್ನ ತಾಯಿಯಾದ ಕಾರಣ ಪ್ರಕರಣಕ್ಕೆ ಅನುಗುಣವಾಗಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

**ಮರು ವಿಚಾರಣೆಃ** ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓದಿ ಹೇಳಿ ಕೇಳಿ ಸರಿ ಇದೆ

**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು**
**ಪ್ರ. ದ. ನ್ಯಾ . ದಂ. ಕುಂದಾಪುರ**